**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 10.07.2021.

**1] ಆಲಮೇಲ ಪೊಲೀಸ ಠಾಣೆ ಗುನ್ನೆ ನಂ: 82/2021 ಕಲಂ: 279, 304 [ಎ] ಐಪಿಸಿ**

ದಿನಾಂಕ 08.07.2021 ರಂದು 19:30 ಗಂಟೆಯ ನಡುವೆ ಇದರಲ್ಲಿಯ ಆರೋಪಿತನಾದ ಅನೀಲಕುಮಾರ ತಂದೆ ಕಲ್ಲಣ್ಣ ಜವಳಿ ಸಾ: ಅಳ್ಳಗಿ ಬಿ ತಾ: ಅಫಜಲಪೂರ, ಜಿ: ಕಲಬುರ್ಗಿ ಕಾರ ನಂ: ಕೆ.ಎ:01 ಎ.ಎಫ್: 4667 ನೇದ್ದರ ಚಾಲಕ ಈತನು ಸಂಜೀವ ತಂದೆ ಸದಾಶಿವ ಕಲಹಳ್ಳಿ ವಯಾ: 38 ವರ್ಷ ಇತನು ದೇವಿಂದ್ರ ತಂದೆ ಸಿದ್ದಪ್ಪ ಮೇಳಕುಂದಿ ಸಾ: 48 ವರ್ಷ ಸಾ: ನಾರಹಳ್ಳಿ ಇತನು ನಡೆಸುತ್ತಿದ್ದ ಮೋಟರ್ ಸೈಕಲ್ ನಂ: ಕೆ.ಎ:28 ಎಸ್: 4937 ನೇದ್ದರ ಮೇಲೆ ಕುಳಿತುಕೊಂಡು ಸಿಂದಗಿಯಿಂದ ನಾಗರಹಳ್ಳಿ ಕಡೆಗೆ ಬರುತ್ತಿರುವಾಗ ಸಿಂದಗಿಯಿಂದ ಆಲಮೇಲ ಕಡೆಗೆ ಬರುವ ರಸ್ತೆ ನಾಗರಹಳ್ಳಿ ಕ್ರಾಸ್ ಹತ್ತಿರ ಸ್ಪೀಡ್ ಬ್ರೆಕ್ ಹತ್ತಿರ ಸಿಂದಗಿ ಕಡೆಯಿಂದ ಕಾರ ನಂ: ಕೆ.ಎ:01 ಎ.ಎಫ್: 4667 ನೇದ್ದರ ಚಾಲಕ ತಾನು ನಡೆಸುತ್ತಿದ್ದ ಕಾರನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ದೇವಿಂದ್ರ ಕುಳಿತುಕೊಂಡು ಬರುತ್ತಿದ್ದ ಮೋಟರ್ ಸೈಕಲ್ ನಂ: ಕೆ.ಎ:28 ಎಸ್: 4937 ನೇದ್ದಕ್ಕೆ ಹಿಂದಿನಿಂದ ಹಾಯಿಸಿ ಅಘಘಾತ ಪಡಿಸಿದ್ದು, ಸದರ ಅಘಘಾತದಲ್ಲಿ ಸಂಜೀವನಿಗೆ ತಲೆಗೆ ಮುಖಕ್ಕೆ ಬಲಗಾಲಿಗೆ ಭಾರಿ ಗಾಯ ಪಡಿಸಿದ್ದು, ಮತ್ತು ದೇವಿಂದ್ರನಿಗೆ ತಲೆಗೆ, ಎಡಗಾಲಿಗೆ ಭಾರಿ ಗಾಯ ಪಡಿಸಿದ್ದು ಇವರಿಬ್ಬರಿಗೂ ಸಿಂದಗಿ ಸರಕಾರಿ ಆಸ್ಪತ್ರೆಯಲ್ಲಿ ಉಪಚಾರ ಮಾಡಿಸಿ ಹೆಚ್ಚಿನ ಉಪಚಾರ ಕುರಿತು ವಿಜಯಪೂರದ ಭಾಗ್ಯವಂತಿ ಆಸ್ಪತ್ರೆಯಲ್ಲಿ ದಾಖಲಿಸಿದ್ದು, ಉಪಚಾರ ಹೊಂದುವಾಗ ಸಂಜೀವ ಇತನು ಉಪಚಾರ ಫಲಿಸದೇ ಇಂದು ಮೃತಪಟ್ಟಿರುತ್ತಾನೆ. ಮತ್ತು ದೇವಿಂದ್ರ ಇತನು ಸಹ ಉಪಚಾರ ಫಲಿಸದೇ ಮೃತಾಗಿದ್ದು ಅದೆ. ಈ ಬಗ್ಗೆ ಲಕ್ಷ್ಮೀ ಸಂಜೀವ ಕಲಹಳ್ಳಿ, ಸಾ: ನಾಗರಹಳ್ಳಿ ತಾ: ಸಿಂದಗಿ, ಜಿ: ವಿಜಯಪುರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.07.2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 196/2021 ಕಲಂ: 288, 304(ಎ) ಐಪಿಸಿ**

ದಿನಾಂಕ 09.07.2021 ರಂದು ಮದ್ಯಾಹ್ನ 12:00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಡಾ: ಅತೀಕ ಅಹ್ಮದ ಶೇಖ ತಂದೆ ಶೇಖ ಇಸ್ಮಾಯಿಲ್ ಸಾ: ನವಭಾಗ 2] ಕಟ್ಟಡ ನಿರ್ಮಾಣದ ಸುಪರ್‌ವೈಸರ್ ಇಮ್ತಿಯಾಜ ತಂ ಅಬ್ದುಲ್ ಖಾದರ ಇನಾಮದಾರ ಸಾ॥ ಟ್ರಜರಿ ಕಾಲನಿ ವಿಜಯಪೂರ 3] ಮೇಸ್ತ್ರೀ ಮಲ್ಲಿಕಾರ್ಜುನ ತಂದೆ ಗುರಪ್ಪ ಉಕ್ಕಲಿ ಸಾ: ಗಾಂಧಿನಗರ ವಿಜಯಪುರ. ಇವರು ಕಟ್ಟಡ ಕಟ್ಟಲು ಅಗತ್ಯ ಮುಂಜಾಗ್ರತೆ ಕ್ರಮ ಕೈಗೊಳ್ಳದೆ ಹಾಗೂ ಸುರಕ್ಷಾ ಸಾಮಗ್ರಿಗಳನ್ನು ಕೊಡದೇ ಪಿರ್ಯಾಧಿದಾರಳ ಗಂಡನಾದ ವಿನೋದ @ದಿನೇಶ ತಂದೆ ಖೀರು ಚವ್ಹಾಣ ವಯಾ 32 ವರ್ಷ ಉ: ಗೌಂಡಿ ಕೆಲಸ ಸಾ॥ ಮಹಲ ಐನಾಪೂರ ಈತನಿಗೆ ನೆಲ ಮಹಡಿಯಲ್ಲಿ ಕೆಲಸಕ್ಕೆ ಹಚ್ಚಿದಾಗ ಸದರ ಕಟ್ಟಡದ ನಾಲಕ್ಕನೇ ಅಂತಸ್ತಿನಿಂದ ಕಟ್ಟಿಗೆಯ ಲಾಪ್ಪರ ತನ್ನ ಗಂಡನ ತಲೆಯ ಮೇಲೆ ಬಿದ್ದು ಅದರಿಂದ ತಲೆಗೆ ಭಾರಿ ಸ್ವರೂಪದ ಗಾಯ ಪೆಟ್ಟು ಆಗಿ ಮೃತನಾಗಿದ್ದು ಸದರ ತನ್ನ ಗಂಡನ ಸಾವಿಗೆ ಸದರಿಯವರ ನಿರ್ಲಕ್ಷತನವೇ ಕಾರಣವಾಗಿರುತ್ತದೆ. ಕಾರಣ ಸದರಿಯವರ ಮೇಲೆ ತನ್ನದು ಪಿರ್ಯಾದಿ ಇರುತ್ತದೆ. ಈ ಬಗ್ಗೆ ಶ್ರೀಮತಿ ಸವಿತಾ ವಿನೋದ @ ದಿನೇಶ ಚವ್ಹಾಣ ಸಾ॥ ಮಹಲ ಐನಾಪುರ ತಾಂಡಾ ತಾ॥ಜಿ॥ ವಿಜಯಪೂರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 106/2021 ಕಲಂ: 328, 32, 34 ಕೆ.ಇ.ಆ್ಯಕ್ಟ.**

ದಿನಾಂಕ 09.07.2021 ರಂದು 16.05 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಪ್ರಕಾಶ ತುಕಾರಾಮ ಚವ್ಹಾಣ ಸಾ: ಸೋಮದೇವರ ಹಟ್ಟಿ ತಾಂಡಾ ನಂ 03 ಈತನು ಸೋಮದೇವರ ಹಟ್ಟಿ ಕ್ರಾಸದ ಸಮೀಪ ಸರಕಾರದಿಂದ ಯಾವುದೇ ಪರಮಿಟ್ ವ ಲೈಸನ್ಸ ಪಡೆಯದೇ ಮಾನವ ಸೇವನೆಗೆ ಯೋಗ್ಯವಲದ್ದ ಕಂಟ್ರಿ ಸರಾಯಿಯನ್ನು ತನ್ನ ಫಾಯ್ದೆಗೊಸ್ಕರ ಮಾರಾಟ ಮಾಡಲು ಹೊರಟಾಗ ಸಿಕ್ಕ ಅಪರಾಧ. ಈ ಬಗ್ಗೆ ಸಾ॥ ತಾ॥ ಎಸ್ ಕೆ ಲಂಗೂಟಿ ಮಪಿಎಸ್ಐ ತಿಕೋಟಾ ಪೊಲೀಸ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.07,2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಕೂಡಗಿ ಪೊಲೀಸ ಠಾಣೆ ಗುನ್ನಾ. ನಂ: 59/2021 ಕಲಂ: ಮಹಿಳೆ ಕಾಣೆ.**

ದಿನಾಂಕ 03.07.2021 ರಂದು 08:30 ಗಂಟೆಯಿಂದ 18:00 ಗಂಟೆಯ ನಡುವಿನ ಅವದಿಯಲ್ಲಿ ಇದರಲ್ಲಿ ಕಾಣೆಯಾದ ಹುಲಗಮ್ಮ ಗಂ ಚಂದ್ರಕಾಂತ ಬಂಡಿವಡ್ಡರ ವಯಾ–21 ವರ್ಷ ಸಾ॥ ತೆಲಗಿ ಇವಳು ಮನೆಯಲ್ಲಿ ಯಾರಿಗೂ ಹೇಳದೆ, ಕೇಳದೆ ಕೂಲಿ ಕೆಲಸಕ್ಕೆ ಹೋದವಳು ಪರ್ತ ಮನೆಗೆ ಬಾರದೇ ಯಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಚಂದ್ರಕಾಂತ ರಾಮಪ್ಪ ಬಂಡಿವಡ್ಡರ ಸಾ॥ ತೆಲಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 09.07,2021 ರಂದು ಕೂಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.